



# ಸೋಜಿಗದ ಗೀಜಗ!

**ಗೂಡು ನಿರ್ಮಿಸುವ ಕೈಚಳಕದಲ್ಲೇ ಗಂಡು ಹಕ್ಕಿ ಹೆಣ್ಣನ್ನು ಆಕರ್ಷಿಸಲು ತನ್ನ ಕರಾಮತ್ತು ತೋರಿಸುತ್ತದೆ. ತಾನು ಅರ್ಧ ನಿರ್ಮಿಸಿದ ಗೂಡನ್ನು ಹೆಣ್ಣಿಗೆ ತೋರಿಸುತ್ತದೆ. ಹೆಣ್ಣು ಒಪ್ಪಿದರೆ ಗೂಡನ್ನು ಪೂರ್ಣಗೊಳಿಸಿ ಎರಡೂ ಮಿಲನ ಹೊಂದುತ್ತವೆ!**

■ **ಪ್ರಕಾಶ ಎಸ್.ಮನ್ನಂಗಿ**
ಚಿತ್ರ : ಆಕಾಶ

**ಹೊ**ಳೆ, ಕೆರೆಗಳ ನೀರಿನ ಮೇಲೆ ಬಾಗಿರುವ ಮರದ ಟೊಂಗೆಗಳ ಇಲ್ಲವೇ ಈಚಲು ಗರಿಗಳ ತುದಿಯಲ್ಲಿ ಅಂದವಾದ ಗೂಡು ನಿರ್ಮಿಸುವ ಗೀಜಗ ಹಕ್ಕಿ ಒಬ್ಬ ಎಂಜಿನಿಯರ್‌ನಂತೆ. ಪ್ಲೋಸಿಯಸ್ ಜಾತಿಗೆ ಸೇರಿದ ಹಕ್ಕಿಗಳಿವು. ಭಾರತದಲ್ಲಿ ಪ್ಲೋಸಿಯಸ್ ಫಿಲಿಪಿನಸ್, ಪ್ಲೋಸಿಯಸ್ ಮನ್ಯಾರ್ ಹಾಗೂ ಪ್ಲೋಸಿಯಸ್ ಬೆಂಗಾಲೆನ್ಸಿಸ್ ಎಂಬ ಪ್ರಭೇದಗಳಿವೆ. ಪ್ಲೋಸಿಯಸ್ ಫಿಲಿಪಿನೆಸ್ ಸಾಮಾನ್ಯವಾದ ಪ್ರಭೇದವಾಗಿದೆ.

ಗುಬ್ಬಚ್ಚಿಯ ಗಾತ್ರದಷ್ಟಿವೆ. 15 ಸೆಂ.ಮೀ. ಉದ್ದವಾಗಿವೆ. ಕಣ್ಣಿನ ಹುಬ್ಬುಗಳೂ ಉದ್ದ. ಕೊಕ್ಕು ಕೊಂಬುಗಳ ಬಣ್ಣದ್ದು. ಸಂತಾನೋತ್ಪತ್ತಿಯ ಕಾಲ ಹೊರತುಪಡಿಸಿ ಬೇರೆ ಕಾಲದಲ್ಲಿ ಗುಬ್ಬಚ್ಚಿಯಂತಿರುತ್ತದೆ. ಸಂತಾನೋತ್ಪತ್ತಿಯ ಕಾಲದಲ್ಲಿ ಗಂಡಿಗೆ ದಟ್ಟ ಹಳದಿ ಬಣ್ಣದ ಕಿರೀಟವಿರುತ್ತದೆ. ಕಂದು ಮಿಶ್ರಿತ ಕಪ್ಪು ಕೊಕ್ಕು, ಮೇಲ್ಭಾಗ ಹಳದಿ ಕಲೆಗಳಿರುವ ದಟ್ಟ ಕಂದು ಬಣ್ಣದ್ದಾಗಿದೆ. ಹಳದಿ ಬಣ್ಣದ ಎದೆಯಿದೆ. ಬಾಲ ಚೌಕವಾಗಿ ಕತ್ತರಿಸಿದಂತಿರುತ್ತದೆ.

ಗೀಜಗನ ಹಕ್ಕಿಗಳು ಸಾಮಾನ್ಯವಾಗಿ ಗುಂಪುಗಳಲ್ಲಿರುತ್ತವೆ. ಸಸ್ಯಾಹಾರಿ.

(8ನೇ ಪುಟ ನೋಡಿ)